ಮಾಡಿ ಓದಲೆಂದು ಕಳಿಸಿತ್ತು. ಅವನು ನನಗೆ ಹತ್ತಿರವಾದದ್ದು ಕೂಡ ಅಕಸ್ಮಿಕವೇ.

ಡಿಮಿಟ್ರಿ ಎಲ್ಲರ ಗಮನ ಸೆಳೆದದ್ದು ಅವನ ಸೋಮಾರಿತನದಿಂದ. ಎಲ್ಲ ತರಗತಿಗಳಿಗೂ ಅವನದೇ ಕೊನೆಯ ಎಂಟ್ರಿ. "ಡಿಮಿಟ್ರಿ, ಅಲ್ವೇಸ್ ಗಿವ್ಸ್ ದಿ ಲಾಸ್ಟ್ ಎಂಟ್ರಿ'' ಎಂತ ನಾವೆಲ್ಲ ಗೇಲಿ ಮಾಡುತ್ತಿದ್ದೆವು. ಅವನು ಅದಕ್ಕೇನೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಅಡ್ರಿನಲಿನ್ ಜಂಕಿಯಾಗಿದ್ದ ಅವನು, ಬದುಕಿನಲ್ಲಿ ಕಿಕ್‌ಗಾಗಿ ಹಪಹಪಿಸುತ್ತಿದ್ದ.

ಅಂತಹ ಕಿಕ್‌ಗಾಗಿಯೇ ಒಮ್ಮೆ ಎಲೆಕ್ಟ್ರಿಕ್ ತೂತೊಳಗೆ ಬೆರಳಿಡುವ ಸಾಹಸ ಮಾಡಿದ್ದನಂತೆ. ಆಗ ವಿದ್ಯುತ್ ಅವನನ್ನು ಆರಡಿ ಎತ್ತೊಗೆದ 'ಸುಖ'ದ ಬಗ್ಗೆ ಒಮ್ಮೆ ವರ್ಣಿಸಿದ್ದ. ಅದೊಂದು ಬಗೆಯ ವರ್ಣಿಸಲಸದಳವಾದ ಶಾಂತ ಅನುಭವವಾಗಿತ್ತಂತೆ. ಅಲ್ಲಿಯೇ ನಾವಿಬ್ಬರೂ ಕ್ಲಿಕ್ ಆಗಿದ್ದೆವು. ಅಂತಹುದೇ ಹಾರ್ಮೋನುಗಳ ಹರಿಯುವಿಕೆಗಾಗಿ ಹಾತೊರೆಯುತ್ತಿದ್ದ ನನಗೊಬ್ಬ ಜೊತೆಗಾರ ಸಿಕ್ಕಿದ್ದ.

ವೀಕೆಂಡೊಂದರಲ್ಲಿ ಇಬ್ಬರೂ ಅಬ್ ಸೇಲಿಂಗ್‌ಗೆ ಹೋಗಿದ್ದೆವು. ಸೊಂಟಕ್ಕೆ ಹಗ್ಗ ಕಟ್ಟಿಕೊಂಡು ದೊಡ್ಡ ಸೇತುವೆಯಿಂದ ನೇತಾಡಿ ಇಳಿದು, ಕೆಳಗೆ ಹರಿಯುತ್ತಿದ್ದ ನದಿಯ ಮೇಲಿಂದ ದಡಕ್ಕೆ ನೆಗೆದಿದ್ದೆವು. ಮತ್ತೆಮತ್ತೆ 'ಹೋ' ಎಂದು ಕೂಗುತ್ತ ಹತ್ತು ಬಾರಿ ಜಂಪ್ ಮಾಡುವಲ್ಲಿ ಬೇಜಾರಾಗಿ ಹೋಗಿತ್ತು.

ಮುಂದಿನ ತಿಂಗಳು ವಿಮಾನವೇರಿ 'ಸ್ಕೈ ಜಂಪಿಂಗ್' ಮಾಡಿದ್ದೆವು. ಹದಿಮೂರು ಸಾವಿರ ಅಡಿಗಳ ಮೇಲಿಂದ ನುರಿತ ಜಿಗಿತಗಾರನೊಡನೆ ಕೆಳನೆಗೆದು ದೊರಕಿದ ಆನಂದವನ್ನು ಹಂಚಿಕೊಂಡು ಸುಖಿಸಿದ್ದೆವು.

ಬದುಕಿನ ಏಕತಾನತೆಯನ್ನು ಮುರಿಯಲು ಆಗೀಗ ನನಗೂ ಒಂದಿಷ್ಟು ರೋಮಾಂಚನದ ಅನುಭವ ಬೇಕಿತ್ತು.

ಒಂಟಿಯಾಗಿದ್ದ ಅವನು ವರ್ಷ ಪೂರ್ತಿ ಒಂದಿಲ್ಲೊಂದು ಸಾಹಸದಲ್ಲಿ ತೊಡಗಿಕೊಂಡಿರುತ್ತಿದ್ದ. ಆದರೆ, ನನಗೆ ಅದಾಗುತ್ತಿರಲಿಲ್ಲ. ಚಳಿಗಾಲ ಬಂತೆಂದರೆ ಕೆಲಸ ಮುಗಿಸಿ ಬೆಚ್ಚಗೆ ಮನೆಯಲ್ಲಿರಲು ಇಷ್ಟ ಪಡುತ್ತಿದ್ದೆ. ಹಿಮದಲ್ಲೇ ಬೆಳೆದಿದ್ದ ಅವನು ಚಳಿಗಾಲದ ರಜೆಯಲ್ಲಿ ಸ್ಕೀಯಿಂಗ್ ಎಂದು ಆಸ್ಟ್ರಿಯಾ, ಫ್ರಾನ್ಸ್, ಇಟಲಿ ಅಂತ ಹೊಸ ಜಾಗಗಳನ್ನು ಹುಡುಕಿ ತಿರುಗಾಡಲು ಹೊರಟುಬಿಡುತ್ತಿದ್ದ.

ಹಾಗಾಗಿ, ಒಂದಿಷ್ಟು ಕಾಲ ಜೊತೆಗಿದ್ದ ಈ ನಮ್ಮ ಸ್ನೇಹವೂ 'ಸೀಸನಲ್' ಅನ್ನಬಹುದಿತ್ತು. ಅವನ ಈ ಹವ್ಯಾಸಗಳ ಹೊರತಾಗಿ ಅವನ ವೈಯಕ್ತಿಕ ಬದುಕಿನ ಬಗ್ಗೆ ಹೆಚ್ಚೇನೂ ಗೊತ್ತಿರಲಿಲ್ಲ. ಮಿಕ್ಕವರ ಬಗ್ಗೆ ತಿಳಿದಿದ್ದುದು ಇನ್ನೂ ಕಡಿಮೆ.

## 3

ನಿಧಾನವಾಗಿ ತೇಲಾಡುತ್ತ ಹತ್ತಿಯಂತೆ ಕೆಳಗಿಳಿಯುತ್ತಿದ್ದ ಹಿಮ ಸುರಿತ ಕ್ರಮೇಣ ನಿಂತಿತು. ಇದುವರೆಗೆ ಬಿಳಿಯ ತೆರೆಮರೆಯಲ್ಲಿ ಮಸುಕು ಮಸುಕಾಗಿ ಕಾಣುತ್ತಿದ್ದ ಸ್ವೀಡನ್ನಿನ ದೃಶ್ಯಗಳೆಲ್ಲ ಈಗ ನಿಚ್ಚಳವಾಗಿ ಕಾಣತೊಡಗಿದವು.

ರಸ್ತೆಯ ಇಕ್ಕೆಲಗಳಲ್ಲಿ ಹರಿಯುತ್ತಿದ್ದ ಕೆಲವು ತೊರೆಗಳು, ನಡುವೆ ಬಿದ್ದಿದ್ದ ಶೀತಲ ಮಂಜು ಗಡ್ಡೆಗಳ ಮಧ್ಯೆ ನುಗ್ಗಲು ಸೆಣಸುತ್ತಿದ್ದಂತೆ ಕಾಣುತ್ತಿತ್ತು. ಬಿಳಿಯ ಹಿಮದ ಗಡ್ಡೆಗಳ ಕಾರಣ ಹರಿಯುತ್ತಿದ್ದ ಅಲ್ಪ ಸ್ವಲ್ಪ ನೀರು ಕೂಡ ಬೂದು ಬಣ್ಣಕ್ಕೆ ತಿರುಗಿತ್ತು. ಕೆಲವೆಡೆ ಸಣ್ಣ ಜಲಪಾತಗಳು ಸುರಿಯುತ್ತಿದ್ದ ಹಾಗೆಯೇ ಘನೀಕರಿಸಿದ್ದವು. ಚಲಿಸುವ ಚಿತ್ರವೊಂದು ಥಟ್ಟನೆ ಸ್ತಬ್ಧವಾದ ವಿಚಿತ್ರ ಅನುಭೂತಿಯನ್ನು ಅವು ಸೃಷ್ಟಿಸಿದ್ದವು.